# ಎಸ್. ಎಲ್. ಭೈರಪ್ಪನವರ 'ಭಿತ್ತಿ' ಆತ್ಮಕಥೆ: ಸಾಮಾಜಿಕ, ಸಾಂಸ್ಕೃತಿಕ ವಿಶ್ಲೇಷಣೆ

**ಉಮೇಶ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹೊಳೆನರಸೀಪುರ, ಹಾಸನ ಜಿಲ್ಲೆ.

DOI: https://doi.org/10.5281/zenodo.17486848

## ABSTRACT:

ಆಧುನಿಕ ಕಾಲಘಟ್ಟದ ಪ್ರಮುಖ ಕಾದಂಬರಿಕಾರರಲ್ಲಿ ಎಸ್. ಎಲ್. ಭೈರಪ್ಪನವರು ಒಬ್ಬರಾಗಿದ್ದಾರೆ. ಇವರ ಕೃತಿಗಳು ಇಂಗ್ಲಿಷ್ ಹಾಗೂ ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. 'ಭಿತ್ತಿ' ಎಸ್. ಎಲ್. ಭೈರಪ್ಪನವರ ಆತ್ಮಕಥನ. ಯಾವುದೇ ಆತ್ಮಕಥನಗಳು ಕೇವಲ ಒಬ್ಬ ವ್ಯಕ್ತಿಯ ಜೀವನ ಚರಿತ್ರೆಗಳಾಗಿರುವುದಿಲ್ಲ. ಬದಲಾಗಿ ಆ ಕೃತಿಯಲ್ಲಿ ಅವರು ಬದುಕಿದ್ದ ತಮ್ಮ ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಚಿತ್ರಣಗಳು ಬಿತ್ತರಗೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಎಸ್.ಎಲ್. ಭೈರಪ್ಪ ಅವರ ಆತ್ಮಕಥೆಯಲ್ಲಿ ಅನಾವರಣಗೊಂಡಿರುವ ಜಾತೀಯತೆ, ಸಾಮಾಜಿಕ ಅಸಮಾನತೆ, ಅವರ ಶೈಕ್ಷಣಿಕ ವಿಚಾರಗಳ ವಿಶಿಷ್ಟ ಅನುಭವಗಳು ಮತ್ತು ರಾಷ್ಟ್ರಾಭಿಮಾನ ಕುರಿತಂತೆ ವಿಸ್ತೃತವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

## KEYWORDS:

ಗ್ರಾಮೀಣ ಪರಿಸರ, ಪ್ರಾದೇಶಿಕತೆ, ಜಾತೀಯತೆ, ಸಾಮಾಜಿಕ ಅಸಮಾನತೆ, ರಾಷ್ಟ್ರಾಭಿಮಾನ.

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕಾದಂಬರಿಕಾರರು ಮತ್ತು ಲೇಖಕರಲ್ಲಿ ಎಸ್. ಎಲ್. ಭೈರಪ್ಪನವರು ಪ್ರಮುಖ ಬರಹಗಾರರಾಗಿದ್ದಾರೆ. ಕನ್ನಡ ಭಾಷೆಯಲ್ಲಿ ಹಲವಾರು ಕಾದಂಬರಿಗಳನ್ನು ಬರೆದಿರುವ ಎಸ್.ಎಲ್. ಭೈರಪ್ಪನವರು ತತ್ವಶಾಸ್ತ್ರ ವಿಷಯ ಕುರಿತಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯ ಮೀಮಾಂಸೆಗೆ ಸಂಬಂಧಿಸಿದ ವಿಷಯದಲ್ಲೂ ಕೂಡ ಕೃತಿ ರಚನೆ ಮಾಡುವುದರ ಮೂಲಕ ಕನ್ನಡ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ಭಾಷೆಯಲ್ಲಿ ಬರೆದಿರುವ ಇವರ ಕೃತಿಗಳು ಇಂಗ್ಲಿಷ್ ಹಾಗೂ ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿರುವುದು ಗಮನಾರ್ಹ ಸಂಗತಿಯಾಗಿದೆ. ಇವರ ಹಲವಾರು ಕಾದಂಬರಿಗಳು ಹಲವು ಬಾರಿ ಮರು ಮುದ್ರಣಗೊಂಡಿರುವುದು ಇವರ ಕೃತಿಗೆ,

ಇವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. 2023 ನೇ ಸಾಲಿನಲ್ಲಿ ಭಾರತ ಸರ್ಕಾರವು 'ಪದ್ಮಭೂಷಣ' ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ. 'ಭಿತ್ತಿ' ಇವರ ಆತ್ಮಕಥನ. ಯಾವುದೇ ಆತ್ಮಕಥನಗಳು ಕೇವಲ ಒಬ್ಬ ವ್ಯಕ್ತಿಯ ಜೀವನ ಚರಿತ್ರೆಗಳಾಗಿರುವುದಿಲ್ಲ. ಬದಲಾಗಿ ಆ ಕೃತಿಯಲ್ಲಿ ಅವರು ಬದುಕಿದ್ದ ತಮ್ಮ ಕಾಲಘಟ್ಟದ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಚಿತ್ರಣಗಳು ಅನಾವರಣಗೊಂಡಿರುತ್ತವೆ. ಪ್ರಸ್ತುತ ಲೇಖನದಲ್ಲಿ ಎಸ್. ಎಲ್. ಭೈರಪ್ಪನವರ ಆತ್ಮಕಥೆಯಲ್ಲಿ ಅನಾವರಣಗೊಂಡಿರುವ ಅವರ ಶೈಕ್ಷಣಿಕ ವಿಚಾರಗಳ ಅನುಭವಗಳು ಮತ್ತು ಆ ಕಾಲಘಟ್ಟದಲ್ಲಿದ್ದ ಜಾತೀಯತೆ ಮತ್ತು ಸಾಮಾಜಿಕ ಅಸಮಾನತೆ ಕುರಿತು ಸಾಮಾಜಿಕ, ಸಾಂಸ್ಕೃತಿಕವಾಗಿ ವಿಶ್ಲೇಷಿಸಲಾಗಿದೆ.

**ಆತ್ಮಕಥೆಯ ವಿಶ್ಲೇಷಣೆ:**

ಎಸ್. ಎಲ್. ಭೈರಪ್ಪನವರ 'ಭಿತ್ತಿ' ಕನ್ನಡದ ಪ್ರಮುಖ ಆತ್ಮಕಥೆಗಳಲ್ಲಿ ಒಂದಾಗಿದೆ. ಭೈರಪ್ಪನವರು ತಮ್ಮ ಗ್ರಾಮೀಣ ಪರಿಸರ ಮತ್ತು ಪ್ರಾದೇಶಿಕತೆಯನ್ನು ಹಾಗೂ ತಾವು ಪ್ರವಾಸ ಮಾಡಿದ ಇತರ ಪ್ರದೇಶಗಳ ಚಿತ್ರಣಗಳನ್ನು ತಮ್ಮ ಆತ್ಮಕಥೆಯಲ್ಲಿ ವಿಶಿಷ್ಟವಾಗಿ, ನಿಜವಾಗಿ ನಿರೂಪಿಸಿದ್ದಾರೆ. ಈ ಅಂಶಗಳ ಹಿನ್ನೆಲೆಯಲ್ಲಿ ಭೈರಪ್ಪನವರ ಗ್ರಾಮೀಣ ಪರಿಸರ, ಸಾಂಸ್ಕೃತಿಕ ಜನಜೀವನ ಹಾಗೂ ಭೌಗೋಳಿಕ ವಿವರಗಳು ಆಪ್ತವಾಗುತ್ತವೆ. ಇದರಿಂದ ಒಬ್ಬ ಲೇಖಕ ಬೆಳೆದು ಬಂದ ಪರಿಸರದ ಚಿತ್ರಣ ದೊರೆಯುವುದಲ್ಲದೆ ಆಯಾ ಪ್ರದೇಶದ ಸಾಂಸ್ಕೃತಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತದೆ. "ಸಂತೇಶಿವರ ಚಚ್ಚೌಕವಾದ ನಾಲ್ಕು ಬೀದಿಗಳ, ಸುಮಾರು ನೂರು ಮನೆಗಳ ಊರು. ನಾಲ್ಕು ಮೈಲಿ ದೂರದ ಹೋಬಳಿ ಕೇಂದ್ರ ನುಗ್ಗೆನಹಳ್ಳಿ. ಅವರು ನಮ್ಮ ಊರನ್ನು ಹಳ್ಳಿ ಎನ್ನುತ್ತಿದ್ದರು".[1] ಈ ಅಂಶಗಳ ಹಿನ್ನೆಲೆಯಲ್ಲಿ ಭೈರಪ್ಪನವರು ತಮ್ಮ ಹುಟ್ಟಿದ ಊರಿನ ಹೆಸರು ಮತ್ತು ವಿಶಿಷ್ಟತೆ ಬಗ್ಗೆ ವಿವರಣೆ ನೀಡುತ್ತಾರೆ. ತಮ್ಮ ಇಳಿ ವಯಸ್ಸಿನಲ್ಲಿ ಆತ್ಮಕಥೆ ರಚನೆ ಮಾಡುತ್ತಿರುವುದರಿಂದ ಹಳೆಯ ನೆನಪುಗಳು ಅಳಿಸಿಲ್ಲ ಎಂಬುದು ಸೋಜಿಗದ ಸಂಗತಿ.

ಭೈರಪ್ಪನವರು ತಮ್ಮ ಆತ್ಮಕಥೆಯಲ್ಲಿ ಗ್ರಾಮೀಣ ಪರಿಸರದ ಪರಿಚಯದೊಂದಿಗೆ ತಮ್ಮ ಬಾಲ್ಯದ ಕೌಟುಂಬಿಕ ಚಿತ್ರಣವನ್ನು ನೀಡಿದ್ದಾರೆ. 'ನಾನು ಮೂರನೆಯವನು. ಹಿರಿಯವಳು ಅಕ್ಕಯ್ಯ. ಹೆಸರು ಸುಬ್ಬು. ...... ನನ್ನ ಎಂಟನೇ ವಯಸ್ಸಿನಲ್ಲಿ ಆಕೆ ತೀರಿಹೋಗಿದ್ದರಿಂದ ಸರಿಯಾಗಿ ಗೊತ್ತಿಲ್ಲ. ನನ್ನ ನಂತರ ಒಂದು ಮಗು ಹುಟ್ಟಿ ಮೂರು ತಿಂಗಳಿಗೆ ತೀರಿ ಹೋಯಿತು. ಆನಂತರ ಲಲಿತ. ಆಮೇಲೆ ನಾರಾಯಣಸ್ವಾಮಿ, ಕೃಷ್ಣಮೂರ್ತಿ, ಅಮ್ಮ ಸಾಯುವಾಗ ಆರು ತಿಂಗಳ ಮಗುವಾಗಿದ್ದ ಸುಶೀಲ. ನಾವು ಎಂಟು ಜನ ಮಕ್ಕಳು' ಎಂದು ಹೇಳಿಕೊಳ್ಳುವುದರ ಮುಖೇನ ಕೌಟುಂಬಿಕ ಚಿತ್ರಣವನ್ನು ಸೊಗಸಾಗಿ ನಿರೂಪಿಸಿದ್ದಾರೆ. ಭೈರಪ್ಪನವರು ತಾವು ಹುಟ್ಟಿದ ಗ್ರಾಮದ

ಚಿತ್ರಣವಲ್ಲದೆ ತಾವು ಅನೇಕ ಕಡೆ ಶಿಕ್ಷಣ ಪಡೆಯುವಾಗ, ಉದ್ಯೋಗ ಜೀವನ ನಡೆಸುವಾಗ ಆ ಸ್ಥಳದ ಚಿತ್ರಣವನ್ನು ತಮ್ಮ ಆತ್ಮಕಥೆಯಲ್ಲಿ ಅಭಿವ್ಯಕ್ತಿಸಿದ್ದಾರೆ. "ನಾನು ನುಗ್ಗೇನಹಳ್ಳಿ ಬಂದಾಗ ಕೆರೆಯಲ್ಲಿ ನೀರಿರಲಿಲ್ಲ. ನೀರು ಬಂದರೂ ಆ ಊರಿನ ಕೆರೆಯು ಬಾಗೂರು ಕೆರೆಯಷ್ಟು ಈಜಲು ಪ್ರಶಸ್ತವಾದುದಲ್ಲ. ಕೆಂಪು ನೀರು, ಸಾಲದ ಆಳ, ದೊಡ್ಡ ಈಜುಗಾರನಿಗೆ ಸಾಲದ ಅಗಲ ಕೂಡ. ಆದರೆ ಊರ ಹುಡುಗರೆಲ್ಲ ಕಲ್ಯಾಣಿಯಲ್ಲಿ ಈಜುತ್ತಿದ್ದರು."[2] ಎಂದು ದಾಖಲಿಸುವುದರ ಮೂಲಕ ಅವರ ಗ್ರಾಮೀಣ ಪರಿಸರದ ಅಂದಿನ ಹಳ್ಳಿಗರ ಜನಜೀವನದ ಸಹಜ ಸಮಾಜ ಜೀವನದ ಚಿತ್ರಣಗಳನ್ನು ನೈಜವಾಗಿ ನಿರೂಪಿಸಿದ್ದಾರೆ.

ಭೈರಪ್ಪನವರ ವಿದ್ಯಾಭ್ಯಾಸದ ಜೀವನ ತುಂಬಾ ಶೋಚನೀಯ ಮತ್ತು ಹಲವು ಹೋರಾಟಗಳಿಂದ ಕೂಡಿದೆ. ತಾವು ತಮ್ಮ ಬಾಲ್ಯಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಶಿಕ್ಷಣ ಪಡೆಯುವುದಕ್ಕೋಸ್ಕರ ಅಲೆದಾಡಿದ ಸ್ಥಿತಿಗತಿಗಳನ್ನು ಆತ್ಮಕಥೆಯಲ್ಲಿ ಮುಕ್ತ ಮನಸ್ಸಿನಿಂದ ದಾಖಲಿಸಿದ್ದಾರೆ. ತಮ್ಮ ಬಾಲ್ಯದಲ್ಲಿಯೇ ತಾಯಿ ಮರಣ ಹೊಂದಿದ ಕಾರಣ ಮನೆಯು ಸಂಕಷ್ಟಕ್ಕೆ ಈಡಾಯಿತು. ಇದಲ್ಲದೆ ತಂದೆಯ ಬೇಜವಾಬ್ದಾರಿತನದಿಂದ ಕುಟುಂಬದಿಂದ ಹೊರಬಂದ ಭೈರಪ್ಪನವರು ಶಿಕ್ಷಣ ಪಡೆಯಬೇಕು ಎಂಬ ಛಲ ಮತ್ತು ಹಂಬಲದಿಂದ ಮುಂದುವರಿದರು. ಶಿಕ್ಷಣ ಪಡೆಯುವುದಕ್ಕಾಗಿ ಅಲೆಮಾರಿಯಾಗಿ ವಾರಾನ್ನ, ಭಿಕ್ಷಾನ್ನ, ಅನಾಥಾಲಯ ಮತ್ತು ಕೆಲವು ಹಾಸ್ಟೆಲ್‌ಗಳಲ್ಲಿ ಜೀವಿಸಿ ಭಿಕ್ಷೆ ಬೇಡಿ ಶಿಕ್ಷಣವನ್ನು ಪಡೆದು ಸಾಗಿದವರಾಗಿದ್ದಾರೆ. ಶಿಕ್ಷಣ ಪಡೆಯಲು ಹಣ ನಿರ್ವಹಣೆಗಾಗಿ ಹಲವಾರು ಊರುಗಳನ್ನು ತಿರುಗಿ ಕಥೆ ಮತ್ತು ಹಾಡುಗಳನ್ನು ಹೇಳುವುದರ ಮುಖೇನ ಹಣ ಸಂಪಾದಿಸಿ ಶಿಕ್ಷಣ ಪಡೆದವರು. ಶಿಕ್ಷಣಕ್ಕಾಗಿ ಸಿನಿಮಾ ಥಿಯೇಟರಿನ ಗೇಟ್‌ಕೀಪರ್ ಆಗಿ, ಹೋಟೆಲುಗಳಲ್ಲಿ ಸಪ್ಲೈಯರ್ ಆಗಿ ಕೆಲಸ ಮಾಡಿದ್ದಾರೆ. ರೈಲು ಮತ್ತು ಬಸ್ಸು ನಿಲ್ದಾಣಗಳಲ್ಲಿ ಹಮಾಲಿಯಾಗಿ ಕೆಲಸ ಮಾಡಿ ದುಡಿದು ವಿದ್ಯಾಭ್ಯಾಸ ಮತ್ತು ಕುಟುಂಬ ಜೀವನವನ್ನು ನಿರ್ವಹಿಸಿದ್ದಾರೆ. ಇಂತಹ ಅಪರೂಪದ ಸಂಗತಿಗಳನ್ನು ಭೈರಪ್ಪನವರು ತಮ್ಮ ಆತ್ಮಕಥೆಯಲ್ಲಿ ನೈಜವಾಗಿ ಅನಾವರಣಗೊಳಿಸಿದ್ದಾರೆ.

ಭೈರಪ್ಪನವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಂತೇಶಿವರದಲ್ಲಿ ಮುಗಿಸಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ನುಗ್ಗೇನಹಳ್ಳಿಗೆ ಹೋಗುತ್ತಾರೆ. ಅವರು ತಾಯಿಯ ತವರೂರಾದ ಬಾಗೂರಿನಲ್ಲಿ, ಅಲ್ಲಿನ ಮನೆಯಲ್ಲಿದ್ದುಕೊಂಡು ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಡುತ್ತಾರೆ. ಆದರೆ ಭೈರಪ್ಪನವರ ಮಾವ ಶಿಕ್ಷಣ ಕಲಿಯುವ ವಾತಾವರಣ ನಿರ್ಮಾಣ ಮಾಡಿಕೊಡದೇ ಅವರಿಗೆ ಹಿಂಸೆ ನೀಡುತ್ತಿದ್ದ. ಇದೇ ವೇಳೆಯಲ್ಲಿ ತಾಯಿ ಪ್ಲೇಗ್ ರೋಗಕ್ಕೆ ತುತ್ತಾಗಿ ತೀರಿ ಹೋಗುತ್ತಾರೆ. ತಾಯಿ ತೀರಿದ ಬಳಿಕ ತಮ್ಮ ಬದುಕಿಗೆ ಭದ್ರತೆ, ಆಶ್ರಯ ಉಳಿಯದೆ ಅಲೆಮಾರಿಯಾಗಿ ಜೀವನ

ಸಾಗಿಸುತ್ತಾ ಶಿಕ್ಷಣವನ್ನು ಪಡೆಯುತ್ತಾರೆ. ಭೈರಪ್ಪನವರಿಗೆ ಅವರ ಶಾಲೆಯ ಗುರುಗಳೇ ಶಿಕ್ಷಣವನ್ನು ನೀಡುವುದರ ಜೊತೆಜೊತೆಗೆ ಅನ್ನದಾನ ನೀಡಿ ಬದುಕಿನ ದಾರಿ ನಿರ್ಮಾಣ ಮಾಡಿಕೊಟ್ಟಿದ್ದಾರೆ. ಇದಲ್ಲದೆ ಭೈರಪ್ಪನವರು ತಮ್ಮ ಬಾಲ್ಯಶಿಕ್ಷಣದಿಂದ ಪದವಿ ಶಿಕ್ಷಣದವರೆವಿಗೆ ಅನೇಕ ಗುರುಗಳು ಸಹಾಯ ಮಾಡಿರುವುದನ್ನು ಆತ್ಮಕಥೆಯಲ್ಲಿ ಸ್ಮರಿಸಿಕೊಂಡಿದ್ದಾರೆ. ಮಾಧ್ಯಮಿಕ ಶಿಕ್ಷಣವನ್ನು ಗೊರೂರಿನಲ್ಲಿ ಮುಂದುವರಿಸುತ್ತಾರೆ. ನಂತರ ಭೈರಪ್ಪನವರ ಸಂಕಷ್ಟ ಪರಿಸ್ಥಿತಿಯನ್ನು ಕಂಡ ಅವರ ಸ್ನೇಹಿತ ರಾಜ ಎನ್ನುವವನು ಮೈಸೂರಿಗೆ ಹೋಗಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಲಹೆ ನೀಡುತ್ತಾನೆ. ಅದರಂತೆ ಇನ್ನುಳಿದ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಶಾರದಾವಿಲಾಸ ಕಾಲೇಜಿನಲ್ಲಿ ಮುಂದುವರಿಸಲು ವಾರಾನ್ನ, ಭಿಕ್ಷಾನ್ನಗಳ ಮೂಲಕ ಅನಾಥಾಲಯಗಳಲ್ಲಿ ಉಳಿದು ಶಿಕ್ಷಣ ಪಡೆದಿದ್ದಾರೆ. ಭೈರಪ್ಪನವರಿಗೆ ತಮ್ಮ ಬದುಕಿನಲ್ಲಿ ಏನೆಲ್ಲಾ ಸಂಕಷ್ಟಗಳು ಎದುರಾದರೂ, ಅವರ ಸತತ ಅಧ್ಯಯನಶೀಲತೆ ಮತ್ತು ಪರಿಶ್ರಮದಿಂದ ಹಾಗೂ ಹಲವು ಗುರುಗಳ ಮಾರ್ಗದರ್ಶನದಿಂದ ತಮ್ಮ ಶಿಕ್ಷಣವನ್ನು ಪೂರೈಸಿದ್ದಾರೆ. ಬಿ.ಎ.ಆನರ್ಸ್ ಪದವಿಯನ್ನು ಪ್ರಥಮ ದರ್ಜೆಯೊಂದಿಗೆ, ಎಂ.ಎ. ಪದವಿಯನ್ನು ಅವರ ಆಸಕ್ತಿದಾಯಕ ತತ್ವಶಾಸ್ತ್ರ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪೂರೈಸುತ್ತಾರೆ. ತದನಂತರ ಅಧ್ಯಾಪಕ ವೃತ್ತಿಯನ್ನು ಕರ್ನಾಟಕದಲ್ಲಿ ಆರಂಭಿಸಿ ಗುಜರಾತಿನಲ್ಲಿ ಆರು ವರ್ಷ, ದೆಹಲಿಯಲ್ಲಿ ಹಲವು ವರ್ಷ ಅಧ್ಯಾಪಕ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರು. ತದನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳ ಕಾಲ ಅಧ್ಯಾಪಕ ವೃತ್ತಿ ಪೂರೈಸಿ ಸಾಹಿತ್ಯ ಮತ್ತು ಶಿಕ್ಷಣ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಇಂತಹ ಅಪರೂಪದ ಅಂಶಗಳೆಲ್ಲವನ್ನು ಭೈರಪ್ಪನವರು ತಮ್ಮ ಆತ್ಮಕಥೆಯಲ್ಲಿ ನಿವೇದಿಸಿಕೊಂಡಿದ್ದಾರೆ.

ಭೈರಪ್ಪನವರು ಆತ್ಮಕಥೆಯಲ್ಲಿ ತಮ್ಮ ಕಾಲಘಟ್ಟದಲ್ಲಿ ಅಸ್ತಿತ್ವದಲ್ಲಿದ್ದ ಜಾತಿ ಸಮಸ್ಯೆ, ಸಾಮಾಜಿಕ ಅಸಮಾನತೆ ಮತ್ತು ಅವುಗಳ ಶ್ರೇಣೀಕೃತ ವ್ಯವಸ್ಥೆಗಳನ್ನು ಮುಕ್ತವಾಗಿ ಅನಾವರಣಗೊಳಿಸಿದ್ದಾರೆ. ಭೈರಪ್ಪನವರು ಸ್ವತಃ ತಮ್ಮ ಜೀವನದಲ್ಲಿ ಈ ಜಾತಿವ್ಯವಸ್ಥೆ ಮತ್ತು ಸಾಮಾಜಿಕ ಅಸಮಾನತೆಗಳನ್ನು ನಾನಾ ವಿಧಗಳಲ್ಲಿ ಅನುಭವಿಸಿರುವುದನ್ನು ಅವರ ಆತ್ಮಕಥೆಯಲ್ಲಿ ಕಾಣಬಹುದಾಗಿದೆ. "ದೀಕ್ಷೆ ತೆಗೆದುಕೊಂಡ ಗಂಡಸರು ಮತ್ತು ಹೆಂಗಸರು ಶಿವಾಚಾರೇತರರ ಮನೆಯಲ್ಲಿ ನೊಣಬ ಗೌಡರ ಮನೆಯಲ್ಲಿ ಕೂಡ, ಪ್ರಾಣ ಹೋದರೂ ನೀರನ್ನು ಮುಟ್ಟುತ್ತಿರಲಿಲ್ಲ. ಜಂಗಮರಂತೂ ಮಡಿಯಲ್ಲಿ ಬ್ರಾಹ್ಮಣರಿಗಿಂತ ದಶಾಂಗುಲ ಉಚ್ಚ ಸ್ಥಾನವನ್ನು ಸಾಧಿಸುತ್ತಿದ್ದರು. ಇಷ್ಟು ಮಾತ್ರವಲ್ಲ ಗಂಗಡಿಕಾರ ಗೌಡರ ಹೆಂಗಸರು ಕುರುಬ ಗೌಡರ ಮನೆಯದನ್ನು ತಿನ್ನುತ್ತಿರಲಿಲ್ಲ. ........... ಬೆಸ್ತ, ಉಪ್ಪಾರ, ಕುಂಬಾರ, ಗಾಣಿಗ ಮೊದಲಾದ ಹತ್ತು ಹಲವು ಜಾತಿಗಳವರೂ ತಾವೂ ಇಂತಿಂಥ ಜಾತಿಗಳಲ್ಲಿ ತಿನ್ನುವುದಿಲ್ಲ ಎನ್ನುವ ಮೂಲಕ ಅವರಿಗಿಂತ ತಮ್ಮದು ಉತ್ತಮ ಜಾತಿ ಎಂಬುದನ್ನು

ಘೋಷಿಸಿಕೊಳ್ಳುತ್ತಿದ್ದರು"[3] ಎಂಬ ಭೈರಪ್ಪನವರ ವಿವರಣೆಗಳಿಂದ ಆ ಕಾಲಘಟ್ಟದಲ್ಲಿ ಅಸ್ತಿತ್ವದಲ್ಲಿದ್ದ ಜಾತಿ ವ್ಯವಸ್ಥೆ, ಸಾಮಾಜಿಕ ಅಸಮಾನತೆ, ವರ್ಗ-ವರ್ಣ ಮುಂತಾದ ಸಾಮಾಜಿಕ ವಿಷಮತೆಗಳನ್ನು ಮನಗಾಣಬಹುದಾಗಿದೆ. ಇದಲ್ಲದೆ ಅಂದಿನ ಸಮಾಜದಲ್ಲಿದ್ದ ಶ್ರೇಣೀಕೃತ ಜಾತಿವ್ಯವಸ್ಥೆ ಮತ್ತು ಅವರಲ್ಲೇ ಇದ್ದ ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಮತ್ತು ಸ್ಪೃಶ್ಯ-ಅಸ್ಪೃಶ್ಯ ಎಂಬ ಸಾಮಾಜಿಕ ಅಸಮಾನತೆಯ ಪಿಡುಗುಗಳು ಅಸ್ತಿತ್ವದಲ್ಲಿದ್ದವು ಎಂಬ ನೈಜ ಸಂಗತಿಯನ್ನು ಭೈರಪ್ಪನವರು ನಿರ್ಭಯವಾಗಿ ದಾಖಲಿಸಿದ್ದಾರೆ.

"ನಮ್ಮೂರ ನಾಯಿಂದನು ಲಿಂಗಧಾರಣೆಯಾದವನು. ಕೆಲವು ಜಾತಿಗಳಿಗೆ ಕ್ಷೌರ ಮಾಡುತ್ತಿರಲಿಲ್ಲ........ ಮಡಿ ಮೈಲಿಗೆಗಳು, ಆಹಾರ ನಿಷೇಧಗಳು ಚಿಕ್ಕ ಮಕ್ಕಳಿಗೂ ಅನ್ವಯವಾಗುತ್ತಿದ್ದವು. ನೊಣಬ ಲಿಂಗಾಯಿತರ ಹುಡುಗ ಸಂತೆಯಲ್ಲಿ ಮಗ್ಗದ ಜಯಮ್ಮನ ಅಂಗಡಿಯ ವಡೆ ತಿಂದದ್ದು ಗೊತ್ತಾಗಿ ಅವನ ಮನೆಯವರು ಹಿಡಿದು ಸೋಗೆ ದಿಂಡಿ ಮುರಿಯುವ ತನಕ ಚಚ್ಚುತ್ತಿದ್ದುದು, ಮಗ್ಗದ ಶೆಟ್ಟರ ಹುಡುಗನು ಎಡಗೈ ಮತದ ಆಳು ಕುಕ್ಕಿಕೊಟ್ಟ ಎಳನೀರು ಕುಡಿದನೆಂಬುದು ಗೊತ್ತಾಗಿ ಜಾತಿಸ್ಥರು ಅವನ ಅಪ್ಪ ಅಮ್ಮನಿಗೆ ಹೇಳಿ ಅವರು ತಮ್ಮ ಮಗನಿಗೆ ಬಾಸುಂಡೆ ಬರಿಸಿದುದೇ ಅಲ್ಲದೆ ಆ ಎಡಗೈ ಹುಡುಗನ ಅಪ್ಪನಿಗೆ ಹೇಳಿ ಅವನಿಗೂ ಚಚ್ಚಿಸಿ ತಾನು ಎಳನೀರು ಕುಕ್ಕಿಕೊಟ್ಟದ್ದು ತಪ್ಪೆಂದು ಮನವರಿಕೆ ಮಾಡಿಸಿದ್ದುದು, ನಾನು ಆಗಾಗ್ಗೆ ನೋಡುತ್ತಿದ್ದ ಕೇಳುತ್ತಿದ್ದ ಸಂಗತಿಗಳು"[4] ಎಂಬಂತ ಸಂಗತಿಗಳ ಮೂಲಕ ಹಲವು ಧರ್ಮೀಯ, ಜಾತಿಯ, ಕಸುಬುಗಳ ಜೀವನ ಆಯಾ ಸಮುದಾಯದ ವಿಧಿ ವಿಧಾನಗಳೇ ಬೇರೆ ಬೇರೆ ಆಗಿರುತ್ತದೆ ಎಂಬುದನ್ನು ಭೈರಪ್ಪನವರು ನಿರೂಪಿಸಿದ್ದಾರೆ. ಭೈರಪ್ಪನವರು ನೀಡುವ ಹಳ್ಳಿಯ ಸಾಮಾಜಿಕ ಚಿತ್ರಣಗಳು ಹಾಗೂ ಬ್ರಾಹ್ಮಣ ಜಾತಿಯ ನೀತಿ ನಿಯಮಗಳನ್ನು ಇತರೆ ಜಾತಿಯವರಿಗಿದ್ದಂತಹ ಅಸಮಾನತೆಯನ್ನು, ತಾರತಮ್ಯಗಳ ನೈಜ ಸ್ಥಿತಿಗತಿಗಳನ್ನು ನೀಡಿರುವುದರಲ್ಲಿ ಅವರ ಕಾಲಘಟ್ಟದ ಸಾಮಾಜಿಕ ಅಸಮಾನತೆಯ ನಿಜರೂಪಗಳು ಅನಾವರಣಗೊಂಡಿವೆ.

ಭೈರಪ್ಪನವರು ತಮ್ಮ ಆತ್ಮಕಥನದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಜಾತಿಪದ್ಧತಿ, ಮೇಲು-ಕೀಳು, ಸ್ಪೃಶ್ಯ - ಅಸ್ಪೃಶ್ಯ ಸಾಮಾಜಿಕ ಅಸಮಾನತೆಗಳು ಯಾವ ರೂಪದಲ್ಲಿ ಅಸ್ತಿತ್ವದಲ್ಲಿದ್ದವು ಎಂಬುದನ್ನು ದಾಖಲಿಸಿದ್ದಾರೆ. ಯಾವ ಯಾವ ಜಾತಿಯವರು ಸಮಾನರು, ಯಾವ ಜಾತಿಯವರ ಮನೆಯಲ್ಲಿ ಊಟ, ಉಪಚಾರ ಮಾಡಲು ಅರ್ಹರು ಮತ್ತು ಅನರ್ಹರು ಎಂಬ ಸಂಗತಿಗಳನ್ನು ಮತ್ತು ಅದಕ್ಕಿರುವ ಸಾಮಾಜಿಕ ಅಸಮಾನತೆಗಳನ್ನು 'ಕೆರೆಕನ ಹಬ್ಬ' ಸಂದರ್ಭದಲ್ಲಿ/ಸನ್ನಿವೇಶದಲ್ಲಿ ವಿವರಿಸುವ ಮೂಲಕ ಉದಾಹರಣೆ ಸಹಿತವಾಗಿ ಪ್ರತಿಬಿಂಬಿಸಿದ್ದಾರೆ. ಅಲ್ಲದೆ ತಾವು ಶಿಕ್ಷಣ ಪಡೆಯುತ್ತಿದ್ದ ಸಂದರ್ಭದಲ್ಲಿ ಹಾಸ್ಟೆಲುಗಳಲ್ಲಿ ಆಯೋಜಿಸುತ್ತಿದ್ದ ಚರ್ಚಾ ಸ್ಪರ್ಧೆಗಳಲ್ಲಿ

ತಮ್ಮದೇ ಆದ ಜಾತಿಯ ಹುಡುಗರಿಗೆ ಮನ್ನಣೆ ನೀಡುವ ಪದ್ಧತಿ ಬೆಳೆದಿತ್ತು ಎಂಬುದನ್ನು ಭೈರಪ್ಪನವರು ಆತ್ಮಕಥನದಲ್ಲಿ ಬಹಿರಂಗವಾಗಿ ಪ್ರಸ್ತುತಪಡಿಸಿದ್ದಾರೆ. ಭೈರಪ್ಪನವರು ತಾವು ಕಂಡಂತೆ, ಅನುಭವಿಸಿದಂತೆ ಇಡೀ ತಮ್ಮ ಹಳ್ಳಿಯ ಬದುಕಿನ ಸಾಂಸ್ಕೃತಿಕ ಚರಿತ್ರೆಯನ್ನು ಅನಾವರಣಗೊಳಿಸಿದ್ದಾರೆ. ಭಾರತದ ಜಾತಿ ವ್ಯವಸ್ಥೆಯ ಸಾಮಾಜಿಕ ಸ್ಥಿತ್ಯಂತರಗಳ ಸ್ಥಿತಿಗತಿಗಳನ್ನು ಅವರ ಆತ್ಮಕಥೆ ಪ್ರತಿಬಿಂಬಿಸಿದೆ. ಆತ್ಮಕಥೆಯಲ್ಲಿ ಭೈರಪ್ಪನವರು ನಿರೂಪಿಸಿರುವ ಹಲವಾರು ಸಂಗತಿಗಳು ಜಾತಿ ಸಮಸ್ಯೆ ಯ ಒಂದೊಂದು ಮುಖಗಳನ್ನು ಅನಾವರಣಗೊಳಿಸಿ ಪ್ರಜ್ಞಾವಂತ ಬರಹಗಾರರಲ್ಲೂ ಮನೆ ಮಾಡಿರುವ ಜಾತಿಭೂತದ ಸನ್ನಿವೇಶಗಳನ್ನು ಮಾರ್ಮಿಕವಾಗಿ ಮತ್ತು ಅಷ್ಟೇ ಸೂಕ್ಷ್ಮವಾಗಿ ನಿವೇದಿಸಿಕೊಂಡಿದ್ದಾರೆ.

ಭೈರಪ್ಪನವರು ಆತ್ಮಕಥೆಯಲ್ಲಿ ತಮ್ಮ ಬಾಲ್ಯ ಜೀವನದಿಂದ ಬದುಕಿನ ಉದ್ದಕ್ಕೂ ಅನುಭವಿಸಿಕೊಂಡು ಬಂದ ಜೀವನದ ಅನುಭವಗಳನ್ನು ಮುಕ್ತವಾಗಿ ದಾಖಲಿಸಿದ್ದಾರೆ. ಈ ಅಂಶಗಳಲ್ಲಿ ಅವರ ಬಂಡಾಯ ಪ್ರಜ್ಞೆ, ಪ್ರತಿಭಟನೆಯ ಧೋರಣೆ ವ್ಯಕ್ತವಾಗಿದೆ. ತಮ್ಮ ಬದುಕಿನಲ್ಲಿ ಹಲವು ಒತ್ತಡಗಳಿಗೆ ಮಣಿಯದೆ ನಿರ್ದಿಷ್ಟ ವ್ಯವಸ್ಥೆಯೊಂದಿಗೆ ರಾಜಿಯಾಗದೇ, ಪ್ರತಿರೋಧ ಮಾಡಿ ಬಂಡಾಯಕ್ಕೆ ಮುಖಾಮುಖಿಯಾಗಿದ್ದಾರೆ. ತಾವು ತಮ್ಮ ಮಾವನ ಮನೆ ಬಾಗೂರಿನಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಪಡೆಯುತ್ತಿದ್ದಾಗ ಅವರಿಂದ ಅತಿಯಾದ ಹಿಂಸೆಗಳನ್ನು ಅನುಭವಿಸುತ್ತಿದ್ದರು. ಆಗ ಒಂದು ದಿನ ಇವರು "ಲೇ ನೀನು ನಾಲ್ಕು ಹೊಡೆದರೆ ನಾನು ಒಂದಾದರೂ ಹೊಡೀತೀನಿ ಕಣ್ಲಾ. ಇನ್ನೊಂದ್ಸಲಿ ಕೈ ಎತ್ತ ನಿಂಗೇನ್ ಮಾಡ್ತೀನಿ ಲೌಡೀ ಮಗನೇ ಎಂದು ಕಿರುಚುತ್ತಾ ಎದ್ದು ನಿಂತೆ"[5] ಎಂಬ ಸಂಗತಿಗಳಲ್ಲಿ ಬಂಡಾಯದ ಮನೋಭಾವವನ್ನು ಗುರುತಿಸಬಹುದಾಗಿದೆ. ಅನಿವಾರ್ಯ ಕಾರಣಗಳಿಂದ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ, ಜೀವನ ನಿರ್ವಹಣೆಗಾಗಿ ಅಲೆಮಾರಿಯಾಗಿ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಹೋಟೆಲ್ ಸಪ್ಲೈಯರ್ ಆಗಿ ಕೆಲಸ ಮಾಡಿದ ಚಿತ್ರಣ, ಹೋಟೆಲ್ ಮಾಲೀಕನು ಅತಿಯಾಗಿ ದುಡಿಸಿಕೊಳ್ಳುತ್ತಿದ್ದನ್ನು ವಿರೋಧಿಸುತ್ತಾರೆ. ಅವನೊಂದಿಗೆ ಕಾಯ್ದೆ, ಕಾನೂನು ಮಾತಾಡಿ, ಹಲ್ಲೆಗೆ ಗುರಿಯಾಗಿ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಬಂಡಾಯ ಎದ್ದಿರುವುದನ್ನು ನಾವು ಆತ್ಮಕಥೆಯಲ್ಲಿ ಕಾಣಬಹುದಾಗಿದೆ. ಭೈರಪ್ಪನವರು ತಮ್ಮ ಬಾಲ್ಯ ಜೀವನ ಮತ್ತು ವಿದ್ಯಾರ್ಥಿ ಜೀವನದ ದಿನಗಳಿಂದಲೇ ಸಾಮಾಜಿಕ ಅಸಮಾನತೆ, ಅನ್ಯಾಯಕ್ಕೆ ಪ್ರತಿಭಟಿಸುತ್ತಾ ಬಂದಿದ್ದಾರೆ. ಹಿರಿಯರಿರಲಿ, ಬಂಧುಗಳಿರಲಿ ಅವರು ಮಾಡುವ ಅನ್ಯಾಯವನ್ನು ಸಹಿಸಿಲ್ಲ.

'ಭಿತ್ತಿ' ಆತ್ಮಕಥನದಲ್ಲಿ ಆ ಕಾಲಘಟ್ಟದಲ್ಲಿ ದೇಶಾಭಿಮಾನ, ಸ್ವಾತಂತ್ರ್ಯ ಚಳುವಳಿಯ ಕಾವು ಭೈರಪ್ಪನವರ ಮೇಲೆ ಯಾವ ಬಗೆಯಲ್ಲಿ ಪ್ರಭಾವ, ಪ್ರೇರಣೆ

ಬೀರಿವೆ ಎಂಬುದನ್ನು ಕೂಡ ತಿಳಿಯಬಹುದಾಗಿದೆ. ಅಂದಿನ ಕಾಲಮಾನದಲ್ಲಿ ಭೈರಪ್ಪನವರು ವಾಸಿಸುತ್ತಿದ್ದ ಸುತ್ತಮುತ್ತಲಿನ ಪ್ರದೇಶಗಳ ಜನರಲ್ಲಿ ಎಂತಹ ಜಾಗೃತಿ ಮತ್ತು ರಾಷ್ಟ್ರಪ್ರೇಮ ಮೈಗೂಡಿತ್ತು ಎಂಬುದನ್ನು ಅವರು ದಾಖಲಿಸಿದ್ದಾರೆ. "ಜವಾಬ್ದಾರಿ ಸರ್ಕಾರದ ಚಳುವಳಿ ಎಲ್ಲ ಕಡೆಗೂ ಹರಡಿತ್ತು. ಒಂದು ದಿನ, ಅಂದು ಗೊರೂರಿನ ಸಂತೆ, ನಮ್ಮ ಶಾಲೆಯ ಹುಡುಗರೆಲ್ಲಾ ಮುಷ್ಕರ ಮಾಡಿ ಊರಿನ ಎಲ್ಲಾ ಬೀದಿಗಳಲ್ಲೂ ಘೋಷಣೆ ಕೂಗುತ್ತಾ ಮೆರವಣಿಗೆ ಮಾಡಿದರು. ಸಂತೆಯ ಮಧ್ಯೆ ಸಭೆ ಸೇರಿಸಿ ಭಾಷಣಗಳಾದವು. ಸಂಪತ್ ಅಯ್ಯಂಗಾರ್ ಮೊದಲಾದವರನ್ನು ಅರೆಸ್ಟ್ ಮಾಡಿದ್ದರಿಂದ ಗೊರೂರಿನ ಸುತ್ತಮುತ್ತಲಿನ ಮುಖ್ಯರು ಪ್ರಚೋದಿತರಾಗಿದ್ದರು. ಅವರೆಲ್ಲ ಮೆರವಣಿಗೆಗೆ ಕುಮ್ಮಕ್ಕು ಕೊಟ್ಟಿದ್ದರು. ವಿದ್ಯಾರ್ಥಿ ಪ್ರತಿನಿಧಿಯಾಗಿ ನಾನು ಭಾಷಣ ಮಾಡಿದೆ. ಅಲ್ಲಿಂದ ಎಲ್ಲ ಸೇರಿ ಹಾಸನ ಅರಕಲಗೂಡು ರಸ್ತೆಯಲ್ಲಿ ಸಂಚರಿಸುವ ವಾಹನಗಳನ್ನು ತಡೆಯುವ ಹಾಗೂ ಹೆಂಡದ ಲಾರಿಗಳನ್ನು ತಡೆದು ಹೆಂಡದ ಪಿಪಾಯಿಗಳನ್ನು ಧ್ವಂಸ ಮಾಡುವ ಕಾರ್ಯಕ್ರಮಕ್ಕೆ ನಡೆದವು". ಹೀಗೆ ಮುಂದುವರೆದು ಹೆಂಡ ಸಾಗಿಸುವ ವಾಹನಗಳನ್ನು ಹಿಡಿದು ಧ್ವಂಸ ಮಾಡಿ 'ಬೋಲೋ ಭಾರತ್ ಮಾತಾಕೀ' ಎಂದು ವಿಜಯ ಘೋಷ ಹಾಕುತ್ತಿದ್ದರು. ಎಂಬ ಮೇಲಿನ ಸಂಗತಿಯ ವಿವರಣೆಗಳು ಭೈರಪ್ಪನವರು ತಮ್ಮ ಕಾಲಘಟ್ಟದಲ್ಲಿ ಸ್ವಾತಂತ್ರ್ಯ ಸಮರ ಮತ್ತು ದೇಶಾಭಿಮಾನದ ಪರವಾಗಿದ್ದರು ಎಂಬುದನ್ನು ಆತ್ಮಕಥೆ ಸಾಬೀತು ಪಡಿಸುತ್ತದೆ.

**ಅಡಿ ಟಿಪ್ಪಣಿಗಳು:**

1. ಭೈರಪ್ಪ ಎಸ್.ಎಲ್., (1996), ಭಿತ್ತಿ, ಸಾಹಿತ್ಯ ಭಂಡಾರ, ಬೆಂಗಳೂರು. ಪು.ಸಂ. 22
2. ಅದೇ, ಪು.ಸಂ. 67
3. ಅದೇ, ಪು.ಸಂ. 22–23
4. ಅದೇ, ಪು.ಸಂ. 59
5. ಅದೇ, ಪು.ಸಂ. 103

## ಪರಾಮರ್ಶನ ಗ್ರಂಥಗಳು:


1. ಭೈರಪ್ಪ ಎಸ್.ಎಲ್., (1996 ), ಭಿತ್ತಿ, ಸಾಹಿತ್ಯ ಬಂಡಾರ, ಬೆಂಗಳೂರು.
2. ವೆಂಕಟೇಶ ಕೆ. (ಸಂ), (2005), ಭೈರಪ್ಪಾಭಿನಂದನ, ಕೊಂಡಜ್ಜಿ ಪ್ರಕಾಶನ, ಬೆಂಗಳೂರು.
3. ಕುಲಕರ್ಣಿ ಡಿ., (2006), ಎಸ್.ಎಲ್. ಭೈರಪ್ಪ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
4. ಸುಮತೀಂದ್ರ ನಾಡಿಗ, (2002), ಎಸ್.ಎಲ್. ಭೈರಪ್ಪ ಅವರ ಕೃತಿಗಳ ವಿಮರ್ಶೆ, ಸುಂದರ ಪ್ರಕಾಶನ, ಬೆಂಗಳೂರು.
5. ಹೆಗ್ಡೆ ಎಚ್.ಬಿ., (2014), ಭಿತ್ತಿಯೊಳಗಿನ ಕ್ರೌರ್ಯ ಮತ್ತು ಕಾರುಣ್ಯ, ಅಕ್ಷರ ಪ್ರಕಾಶನ, ಮೈಸೂರು.
6. ಶಿವಪ್ರಕಾಶ್ ಎಚ್.ಎಸ್., ಭಿತ್ತಿ ಆತ್ಮಕಥೆಯ ಸತ್ಯ ಅನ್ವೇಷಣಾ ಯಾತ್ರೆ, ಉಡುಪಿ ಸಾಹಿತ್ಯ ಸಂಚಿಕೆ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.